ಕರ್ನಾಟಕ ವಿಧಾನ ಪರಿಷತ್

1. ಮಾನ್ಯ ಸದಸ್ಯರ ಹೆಸರು : ಶ್ರೀ ನಸೀರ್ ಅಹ್ಮದ್
(ವಿಧಾನ ಸಭೆಯಿಂದ ಚುನಾಯಿತರಾದವರು)

2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : [redacted]1100

3. ಉತ್ತರಿಸುವ ದಿನಾಂಕ : 29.09.2020

4. ಉತ್ತರಿಸುವ ಸಚಿವರು : ಮಾನ್ಯ ಸಹಕಾರ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬಿಡಿಎ ಎಂಪ್ಲಾಯಿಸ್ ವೆಲ್ಫೇರ್ ಅಸೋಸಿಯೇಷನ್‌ನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಒಟ್ಟು ಎಷ್ಟು ತನಿಖೆಗಳು ನಡೆದಿವೆ: ಯಾರ್‍ಯಾರು ತನಿಖೆ ಮಾಡಿದ್ದಾರೆ: (ವಿವರಗಳನ್ನು ನೀಡುವುದು)</td><td>ಬಿಡಿಎ ಎಂಪ್ಲಾಯಿಸ್ ವೆಲ್ಫೇರ್ ಅಸೋಸಿಯೇಷನ್ ಬೆಂಗಳೂರು, ಈ ಅಸೋಸಿಯೇಷನ್‌ನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25 ರಡಿ ಒಟ್ಟು ನಾಲ್ಕು ವಿಚಾರಣೆಗಳು ನಡೆದಿವೆ. ತನಿಖಾಧಿಕಾರಿಗಳ ವಿವರ ಈ ಕೆಳಕಂಡಂತಿವೆ:
<table>
<tr><th>ಕ್ರ. ಸಂ.</th><th>ವಿಚಾರಣಾಧಿಕಾರಿಗಳ ಹೆಸರು</th></tr>
<tr><td>1</td><td>ಶ್ರೀ ಹೆಚ್.ಟಿ.ಶಿವನಂಜಯ್ಯ, ಅಧಿಕ ಜಿಲ್ಲಾ ನೋಂದಣಾಧಿಕಾರಿ, ಬಿಡಿಎ ಕಛೇರಿ ಆವರಣ, ಬೆಂಗಳೂರು.</td></tr>
<tr><td>2</td><td>ಶ್ರೀ ನಾರಾಯಣಪ್ಪ, ಉಪ ನೋಂದಣಾಧಿಕಾರಿ, ಹೆಸರಘಟ್ಟ, ಬೆಂಗಳೂರು.</td></tr>
<tr><td>3</td><td>ಶ್ರೀ ಎಸ್. ಇಂದುದರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಧೀಶರು.</td></tr>
<tr><td>4</td><td>ಶ್ರೀ ಎಸ್.ಸಿ.ಇಂಗಳಗಿ ನಿವೃತ್ತ ಜಿಲ್ಲಾ ಸೆಷನ್ ನ್ಯಾಯಾಧೀಶರು</td></tr>
</table></td></tr>
<tr><td>ಆ</td><td>ಸದರಿ ಸಂಘವು ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಾಯಿಸಿದ್ದರೂ ಸಂಘ ನೋಂದಾಯಿಸಿರುವ ನಿವೇಶನಗಳ ಕ್ರಯಪತ್ರಗಳಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಸಂಘದ ಕಾಯ್ದೆ 1959 ರಡಿ ನೋಂದಾಯಿಸಿರುವ ಸಂಘ ಎಂದು ಸುಳ್ಳು ಮಾಹಿತಿ ದಾಖಲಿಸಿರುವುದು ನಿಜವೇ: ಹಾಗಿದ್ದಲ್ಲಿ ಸಂಘದ ವಿರುದ್ಧ ಕೈಗೊಂಡ ಕ್ರಮಗಳೇನು :</td><td><u>ಕೈಗೊಂಡ ಕ್ರಮಗಳು:</u>
ಸಂಘದ ಅಧ್ಯಕ್ಷರಾದ ಶ್ರೀ ಬೆಟ್ಟೇಗೌಡ ಮತ್ತು ಪ್ರಧಾನ ಕಾರ್ಯದರ್ಶಿಯಾದ ಶ್ರೀ ಮಲ್ಲಣ್ಣ ಇವರುಗಳ ವಿರುದ್ಧ ಶೇಷಾದ್ರಿಪುರಂ ಪೊಲೀಸ್ ಠಾಣೆ, ಬೆಂಗಳೂರು ಇಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಆದೇಶದಂತೆ ಅಧೀಕ್ಷಕರು, ಸಹಾಯಕ ನಿಬಂಧಕರ ಕಛೇರಿ ಇವರು ದಿನಾಂಕ:04.03.2020 ರಂದು ಕ್ರಿಮಿನಲ್ ದೂರನ್ನು ದಾಖಲಿಸಿರುತ್ತಾರೆ. ಪೊಲೀಸ್ ಇನ್ಸ್‌ಪೆಕ್ಟರ್, ಶೇಷಾದ್ರಿಪುರಂ ಪೋಲೀಸ್ ಠಾಣೆ, ಬೆಂಗಳೂರು ರವರು ದಿನಾಂಕ: 09-03-2020 ರಂದು ಈ ಬಗ್ಗೆ ಹಿಂಬರಹವನ್ನು ನೀಡಿ ಹಿಂಬರಹದಲ್ಲಿ, "ದೂರಿನಲ್ಲಿ ತಿಳಿಸಿರುವ ಅಂಶಗಳು ಮತ್ತು ಈಗಾಗಲೇ ಶೇಷಾದ್ರಿಪುರಂ ಪೋಲೀಸ್ ಠಾಣೆಯಲ್ಲಿ (ಮೊ.ಸಂ:69/2016) ದಾಖಲಾಗಿ ಮಾನ್ಯ ನ್ಯಾಯಾಲಯದಲ್ಲಿ ಸಿಸಿ ನಂ.3681/2018 ರಲ್ಲಿ ವಿಚಾರಣೆಯಲ್ಲಿರುವ ಪ್ರಕರಣದಲ್ಲಿನ ಅಂಶಗಳು ಹಾಗೂ ಆರೋಪಿತರು ಒಬ್ಬರೆ ಆಗಿದ್ದು, ಒಂದೇ ವಿಷಯದ ಮತ್ತು ಎರಡು ಪ್ರಕರಣಗಳಿಗೆ ಒಬ್ಬರೆ ಆರೋಪಿತರಿರುವುದರಿಂದ ಮತ್ತೊಂದು ಎಫ್‌ಐಆರ್ ಅನ್ನು ದಾಖಲಿಸಲು</td></tr>
</table>

		ಕಾನೂನಿನಲ್ಲಿ ಅವಕಾಶವಿಲ್ಲದ ಇರುವ ಪ್ರಯುಕ್ತ ತಾವು ನೀಡುತ್ತಿರುವ ದೂರು ಮತ್ತು ದೂರಿನೊಂದಿಗೆ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಸ್ವೀಕರಿಸಿಕೊಂಡು ಈಗಾಗಲೇ ಶೇಷಾದ್ರಿಪುರಂ ಪೊಲೀಸ್ ಠಾಣೆ ಮೊ.ಸಂ. 69/2016 ಪ್ರಕರಣಕ್ಕೆ ಅಡಕಗೊಳಿಸಿಕೊಂಡು (ಮಾನ್ಯ ನ್ಯಾಯಾಲಯದಲ್ಲಿ ಸಿ.ಸಿ.ನಂ.3681/2018) ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದ ಅನುಮತಿ ಪಡೆದು ತನಿಖೆಯನ್ನು ಮುಂದುವರೆಸಿ ಕಲಂ 173(8) ಸಿಆರ್‌ಪಿಸಿ ಅಡಿಯಲ್ಲಿ ಹೆಚ್ಚುವರಿ ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದೆಂದು ಹಿಂಬರಹ ನೀಡಿರುತ್ತಾರೆ".
ಇ	ಸಂಘಕ್ಕೆ ಆಡಳಿತಾಧಿಕಾರಿಯನ್ನು ಯಾವ ದಿನಾಂಕದಂದು ನೇಮಿಸಲಾಗಿದೆ: ನೇಮಿತ ಆಡಳಿತಾಧಿಕಾರಿ ಈವರೆಗೂ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು)	ದಿನಾಂಕ: 04-05-2020 ರ ಸರ್ಕಾರದ ಆದೇಶದನ್ವಯ ಶ್ರೀ ಆರ್. ಲೋಕೇಶ್, ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಸಮಾಪನಾಧಿಕಾರಿ, ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆ ಇವರನ್ನು ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್, ಬೆಂಗಳೂರು, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. ಆಡಳಿತಾಧಿಕಾರಿಗಳು ದಿನಾಂಕ: 27-05-2020 ರಂದು ಸಂಘದ ಸ್ವಯಂ ಪ್ರಭಾರ ಪಡೆದು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತಾರೆ:- 1. 2018-19ನೇ ಸಾಲಿನ ಹಾಗೂ 2019-20 ನೇ ಸಾಲಿನ ಸಂಘದ ಲೆಕ್ಕ ಪುಸ್ತಕಗಳನ್ನು ಪೂರ್ಣಗೊಳಿಸಿ, ಲೆಕ್ಕಪರಿಶೋಧನೆಗೆ ಒಳಪಡಿಸಲಾಗಿರುತ್ತದೆ. 2. 2018-19 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯು ಪೂರ್ಣಗೊಂಡಿದೆ. 2019-20 ನೇ ಸಾಲಿನ ಸಂಘದ ಲೆಕ್ಕಪರಿಶೋಧನೆಯು ಪ್ರಗತಿಯಲ್ಲಿರುತ್ತದೆ. 3. ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಹಿಂದಿನ ಆಡಳಿತ ಮಂಡಳಿಯ ನಿರ್ದೇಶಕರುಗಳು ನಿವೃತ್ತಿಯ ನಂತರವೂ ಮುಂದುವರೆದಿರುವ ಬಗ್ಗೆ ಯಾವ ದಿನಾಂಕಕ್ಕೆ ಆಡಳಿತ ಮಂಡಳಿಯ ಸದಸ್ಯರು ನಿವೃತ್ತಿಯಾಗಿರುತ್ತಾರೆ ಎಂಬ ಮಾಹಿತಿ ಕೋರಿ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಂದ ಪಡೆಯಲು ದಿನಾಂಕ: 13-8-2020 ರಂದು ಪತ್ರ ಬರೆದು ಕ್ರಮವಿಟ್ಟಿರುತ್ತಾರೆ.
ಈ	ಸಂಘದಿಂದ ನಿವೇಶನ ಸಿಗದೇ ವಂಚನೆಗೊಳಗಾಗಿರುವ ಪ್ರಾಧಿಕಾರ ನಿವೃತ್ತ ನೌಕರರಿಗೆ ನಿವೇಶನಗಳನ್ನು ಒದಗಿಸಿಕೊಡುವ ದಿಸೆಯಲ್ಲಿ ಜರುಗಿರುವ ಕ್ರಮಗಳೇನು :	ಸಂಘದಿಂದ ನಿವೇಶನ ಸಿಗದೇ ವಂಚನೆಗೊಳಗಾಗಿರುವ ಪ್ರಾಧಿಕಾರ ನಿವೃತ್ತ ನೌಕರರಿಗೆ ನಿವೇಶನ ನೀಡಲು, ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಇವರಿಗೆ ಮೂರು ಎಕರೆ ಭೂಮಿ ಮಂಜೂರು ಮಾಡಲು ಆಡಳಿತಾಧಿಕಾರಿಯು ದಿನಾಂಕ: 25-8-2020 ರ ಪತ್ರ ಬರೆದು, ಕೋರಿರುತ್ತಾರೆ.

ಸಿಒ 52 ಸಿಎಸ್‌ಆರ್ 2020

(ಎಸ್.ಟಿ.ಸೋಮಶೇಖರ್)

ಸಹಕಾರ ಸಚಿವರು